**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,</u>**

**<u>ದೊಡ್ಡಬಳ್ಳಾಪುರ</u>**

**ಸಿ ಸಿ ನಂ : 10/2018**

**ಪಿ ಡಬ್ಲೂ - 6**

**ಸಿ ಡಬ್ಲೂ - 7**

**ದಿಃ 28.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| **ಹೆಸರು** | **ಃ** | **ಸಿ.ಹೆಚ್. ನಾರಾಯಣಪ್ಪ** |
| **ತಂದೆಯ ಹೆಸರು** | **ಃ** | **ಹನುಮಂತಯ್ಯ** |
| **ವಯಸ್ಸು** | **ಃ** | **75 ವರ್ಷ** |
| **ಉದ್ಯೋಗ** | **ಃ** | **ವ್ಯವಸಾಯ** |
| **ವಿಳಾಸ** | **ಃ** | **ಚಿಕ್ಕಬೆಳವಂಗಲ** |

**<u>ಮುಖ್ಯ ವಿಚಾರಣೆ ಃ</u> ಸ ಸ ಅ ರವರಿಂದ**

ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ಕ್ಕೆ ಸಹಿಯನ್ನು ನಾನು ಸುಮಾರು 7-8 ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಹೋದಾಗ ಪೋಲೀಸರು ಹೇಳಿದಂತೆ ಮಾಡಿದ್ದೆನು. ಪೋಲೀಸರು ಸಿಲಿಂಡರ್ ಸಿಡಿದು ಅನಾಹುತ ಆಗಿದ್ದು, ಅದಕ್ಕೆ ಸಂಬಂಧಿಸಿದಂತೆ ಪಂಚನಾಮೆಯನ್ನು ಮಾಡಿಕೊಂಡು ಬಂದಿದ್ದೇವೆ ಆದ್ದರಿಂದ ಪಂಚನಾಮೆಗೆ ಸಹಿ ಮಾಡಿ ಎಂದು ಕೇಳಿಕೊಂಡರು ಅದರಂತೆ ಸಹಿ ಮಾಡಿದೆನು. ನಿಪಿ-2 ರಲ್ಲಿನ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸ ಸ ಅ ರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ</u> ಸ ಸ ಅ ರವರಿಂದ**

ದಿಃ 05.03.2017 ರಂದು ಪೊಲೀಸರು ನನ್ನ, ಚಾಸಾ-8 ರವರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 11-00 ರಿಂದ 11-30 ಗಂಟೆಯವರೆಗೆ ಮಾಡಿ ನಿಪಿ-7 ಮತ್ತು 8 ರಲ್ಲಿ ಕಾಣುವ ಸಿಲಿಂಡರ್ ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿನ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಇಲ್ಲ ಎಂದು ನುಡಿದಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**